# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 622 |
| ಸದಸ್ಯರ ಹೆಸರು | : | ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 10-07-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ ಸಂಬಂಧಿಸಿದಂತೆ ಬಿ.ಬಿ.ಎಂ.ಪಿ. 5ನೇ ವಾರ್ಡ್ ವ್ಯಾಪ್ತಿಯಲ್ಲಿ ಮೆ: ಜಯಸೂರ್ಯ ಡೆವಲಪರ್ಸ್ ಇವರು ಕರ್ನಾಟಕ ವಿಧಾನ ಮಂಡಲ ಕಾರ್ಯಾಲಯದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಬಿ.ಡಿ.ಎ. ಅನುಮೋದಿತ ಜಯಸೂರ್ಯ ನಗರ 1ನೇ ಹಂತ ಕೋಗಿಲು ಅಗ್ರಹಾರ ರಸ್ತೆ ಇಲ್ಲಿ ವಸತಿ ಬಡಾವಣೆಯನ್ನು ನಿರ್ಮಿಸಿದ್ದು, ಈ ಬಿ.ಡಿ.ಎ. ಅನುಮೋದಿತ ವಸತಿ ಬಡಾವಣೆಗೆ ಒದಗಿಸಿರುವ ವಿದ್ಯುಚ್ಛಕ್ತಿಯನ್ನು ಅನಧಿಕೃತವಾಗಿ ಕಾನೂನು ಬಾಹಿರವಾಗಿ ಅಕ್ಕಪಕ್ಕದ ಖಾಸಗಿ ವ್ಯಕ್ತಿಗಳು ಸಂಪರ್ಕ ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಬಿ.ಬಿ.ಎಂ.ಪಿ. 5ನೇ ವಾರ್ಡ್, ಜಯಸೂರ್ಯ ನಗರ 1ನೇ ಹಂತ ಕೋಗಿಲು ಅಗ್ರಹಾರ ರಸ್ತೆ ಇಲ್ಲಿ ಕರ್ನಾಟಕ ವಿಧಾನ ಮಂಡಲ ಕಾರ್ಯಾಲಯದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದವರು ನಿರ್ಮಿಸಿರುವ ವಸತಿ ಬಡಾವಣೆಯಿಂದ ವಿದ್ಯುಚ್ಛಕ್ತಿಯನ್ನು ಅನಧಿಕೃತವಾಗಿ ಕಾನೂನು ಬಾಹಿರವಾಗಿ ಅಕ್ಕಪಕ್ಕದ ಖಾಸಗಿ ವ್ಯಕ್ತಿಗಳು ಸಂಪರ್ಕ ತೆಗೆದುಕೊಂಡಿರುವ ವಿಷಯಕ್ಕೆ ಸಂಬಂಧಿಸಿದಂತೆ, ಅಧ್ಯಕ್ಷರು, ಜಯಸೂರ್ಯನಗರ ವಿಧಾನಸೌಧ ಬಡಾವಣೆರವರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಸಿ8 ಉಪವಿಭಾಗ, ಬೆಸ್ಕಾಂ ರವರಿಗೆ ಮನವಿ ಪತ್ರ ಸಲ್ಲಿಸಿದ್ದು, ಪತ್ರದಲ್ಲಿ ಸದರಿ ಬಡಾವಣೆಗೆಂದು ಹಾದುಹೋಗಿರುವ ವಿದ್ಯುತ್ ತಂತಿಗಳಿಂದ ಅಥವಾ ಪರಿವರ್ತಕಗಳಿಂದ ಅಕ್ಕಪಕ್ಕದ ಖಾಸಗಿ ಬಡಾವಣೆಗಳಿಗೆ ಅಥವಾ ಅಪಾರ್ಟ್ ಮೆಂಟ್ ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅನುಮತಿ ನೀಡಬಾರದೆಂದು ಕೋರಿರುತ್ತಾರೆ.<br><br>ಸದರಿ ಮನವಿಯನ್ನು ಪರಿಶೀಲಿಸಿದ್ದು, ಪಕ್ಕದ ಬಡಾವಣೆಗೆ 05 ತಾತ್ಕಾಲಿಕ ಸ್ಥಾವರಗಳಿಗೆ Conditions of Supply ನಿಯಮಾವಳಿಯನ್ವಯ, ಕಾನೂನಾತ್ಮಕವಾಗಿ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ನೀಡಲಾಗಿರುತ್ತದೆ. |
| (ಆ) | ಇದರಿಂದಾಗಿ ಬಿ.ಡಿ.ಎ. ಅನುಮೋದಿತ ಜಯಸೂರ್ಯ ನಗರ 1ನೇ ಹಂತ ವಸತಿ ಬಡಾವಣೆಯಲ್ಲಿ ವಾಸಿಸುತ್ತಿರುವ ನಿವಾಸಿಗರಿಗೆ ಪದೇ ಪದೇ ವಿದ್ಯುತ್ ಸರಬರಾಜಿನಲ್ಲಿ ತೊಂದರೆಯಾಗುತ್ತಿದ್ದು, ಇದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಜಯಸೂರ್ಯ ನಗರ 1ನೇ ಹಂತ ಬಡಾವಣೆಯು 2012ನೇ ವರ್ಷದಲ್ಲಿ ಸ್ವಯಂ ಕಾಮಗಾರಿ ಅಡಿಯಲ್ಲಿ ವಿದ್ಯುದೀಕರಣ ಮಾಡಿದ್ದು 10 ವರ್ಷ ಪೂರ್ಣಗೊಂಡಿರುತ್ತದೆ ಮತ್ತು ಈ ಹಿಂದಿನ ಕೆ.ಇ.ಆರ್.ಸಿ ನಿಯಮದ ಪ್ರಕಾರ ಬಡಾವಣೆ ವಿದ್ಯುದೀಕರಣ 1 ವರ್ಷ ನಂತರದಿಂದ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಬಡಾವಣೆ ನಿರ್ವಹಣೆ ಮಾಡುತ್ತಾ ಬಂದಿರುತ್ತದೆ. ಸದರಿ ಬಡಾವಣೆಯಲ್ಲಿ 08 ಸಂಖ್ಯೆಯ ವಿದ್ಯುತ್ ಪರಿವರ್ತಕಗಳು ಇರುತ್ತವೆ. ಅಲ್ಲಿನ ನಿವಾಸಿಗಳಿಗೆ ವಿದ್ಯುತ್ ಅಡಚಣೆಯಾಗದಂತೆ 11ಕೆವಿ ಓವರ್ ಹೆಡ್ ವಾಹಕವನ್ನು ಬದಲಿಸಿ ಭೂಗತ ಕೇಬಲ್ ಅಳವಡಿಸಲಾಗಿದೆ ಹಾಗೂ ಓವರ್ ಹೆಡ್ ಎಲ್ ಟಿ ಮಾರ್ಗವನ್ನು ಬದಲಿಸಿ ಎಲ್.ಟಿ ಎಬಿ ಕೇಬಲ್ ನ್ನು ಅಳವಡಿಸಲಾಗಿದ್ದು, ಸದರಿ ಬಡಾವಣೆಗೆ ಸಹಕಾರನಗರ ಉಪಕೇಂದ್ರದಿಂದ ಹೊರಹೊಮ್ಮುವ ಎಫ್-14 ಫೀಡರ್‌ನಿಂದ ವಿದ್ಯುತ್ ಸರಬರಾಜು ನೀಡುತ್ತಿದ್ದು, ಬಡಾವಣೆಯ ನಿವಾಸಿಗಳಿಗೆ ವಿದ್ಯುತ್ ಸರಬರಾಜಿನಲ್ಲಿ ಯಾವುದೇ ರೀತಿಯ ಅಡಚಣೆ ಆಗದಂತೆ ಕ್ರಮವಹಿಸಲಾಗಿದೆ. |

...2

| | | |
|---|---|---|
| (ಇ) | ಈ ಬಿ.ಡಿ.ಎ. ಅನುಮೋದಿತ ವಸತಿ ಬಡಾವಣೆಯಿಂದ ಅನಧಿಕೃತವಾಗಿ ಕಾನೂನು ಬಾಹಿರವಾಗಿ ಅಕ್ಕಪಕ್ಕದಲ್ಲಿ ಖಾಸಗಿ ವ್ಯಕ್ತಿಗಳು ವಿದ್ಯುಚ್ಛಕ್ತಿಯ ಸಂಪರ್ಕ ಪಡೆದುಕೊಂಡಿರುವುದು ನಿಜವಾದಲ್ಲಿ, ಅಂತಹ ವ್ಯಕ್ತಿಗಳ ವಿರುದ್ಧ ಇದುವರೆವಿಗೂ ಬೆಸ್ಕಾಂ ಅಧಿಕಾರಿಗಳು ಕ್ರಮ ಕೈಗೊಳ್ಳದಿರಲು ಕಾರಣಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಸದರಿ ಜಯಸೂರ್ಯ ನಗರ 1ನೇ ಹಂತದ ಬಡಾವಣೆಯಿಂದ ಅನಧಿಕೃತವಾಗಿ ಕಾನೂನು ಬಾಹಿರವಾಗಿ ಪಕ್ಕದ ಬಡಾವಣೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವುದಿಲ್ಲ.<br><br>ಕೆಇಆರ್‌ಸಿ Recovery of expenditure ನಿಯಮಾವಳಿ 10 clause 3.2.3 ಮತ್ತು ಕೆಇಆರ್‌ಸಿ ನಿಯಮಾವಳಿ 12 clause 3.2.5 ನೇ ತಿದ್ದುಪಡಿಯಂತೆ ಬಡಾವಣೆಗಳಲ್ಲಿ ಮನೆ ನಿರ್ಮಿಸಿದಲ್ಲಿ ವಿದ್ಯುತ್ ಸಂಪರ್ಕ ನೀಡಬೇಕೆಂಬ ನಿಯಮ ಇರುವುದರಿಂದ ಮತ್ತು ಕೆ.ಇ.ಆರ್.ಸಿ ನಿಯಮ 3.1.3(A)(iii) ಸ್ವ-ಕಾಮಗಾರಿ ಅಡಿಯಲ್ಲಿ ಅಳವಡಿಸಿದ ವಿದ್ಯುತ್ ಪರಿವರ್ತಕದಿಂದ ಸಾರ್ವಜನಿಕರಿಗೆ ವಿದ್ಯುತ್ ಸಂಪರ್ಕ ನೀಡಬಹುದಾಗಿರುತ್ತದೆ. ಅದರಂತೆ, ಹಾಲಿ ಕರ್ನಾಟಕ ವಿಧಾನ ಮಂಡಲ ಕಾರ್ಯಾಲಯದ ನೌಕರರು ವಾಸಿಸುತ್ತಿರುವ ಜಯಸೂರ್ಯ ನಗರ 1ನೇ ಹಂತದ ಬಡಾವಣೆಯಲ್ಲಿರುವ 250ಕೆವಿಎ ಪರಿವರ್ತಕದಲ್ಲಿ ಸಂಪರ್ಕಿತ ಭಾರ 50ಕಿ.ವ್ಯಾ ಮಾತ್ರ ಇರುವುದರಿಂದ ಪಕ್ಕದ ಬಡಾವಣೆಯ 05 ಮನೆಗಳಿಗೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಾನುಸಾರ ತಾತ್ಕಾಲಿಕ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಮುಂದುವರೆದು ಶಾಶ್ವತ ವಿದ್ಯುತ್ ಸಂಪರ್ಕ ಅರ್ಜಿ ಸಲ್ಲಿಸಿದ ನಂತರ ಕೆ.ಇ.ಆರ್.ಸಿ ನಿಯಮಾವಳಿ 10 ಮತ್ತು 12ನೇ ತಿದ್ದುಪಡಿಯಂತೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ವಹಿಸಲಾಗುವುದು. |

ಸಂಖ್ಯೆ: ಎನರ್ಜಿ 145 ಇಬಿಎಸ್ 2023

(ಕೆ.ಜೆ.ಜಾರ್ಜ್)
ಇಂಧನ ಸಚಿವರು